ಶ್ರೀ ಎಂ. ಎಸ್. ಕೃಷ್ಣನ್ — ಸ್ವಾಮಿ, ನಾನು ೧೦ ಗಂಟೆಗೆ ಬಂದೆ. ನನಗೆ ಉತ್ತರದ ಕಾಪಿ ಸಿಕ್ಕಿಲ್ಲ. ಮಾನ್ಯ ಮಂತ್ರಿಯವರು ಒಂದು ಪಟ್ಟಿ ಕೊಟ್ಟಿದ್ದಾರೆ ಅದರಲ್ಲಿ ಇರುವವರು ನಾನು ನೋಡಿದಹಾಗೆ ಸರ್ಕಾರದ ಅಧಿಕಾರಿಗಳೇ ಇದ್ದಾರೆ. ಬೇರೆ ಯಾರೂ ಇಲ್ಲ. ನಾನು ಕೇಳುವುದೇನೆಂದರೆ, ಆ ಸಮಿತಿಯಲ್ಲಿ ಈ ಮನೆಯ ಸದಸ್ಯರುಗಳು ಇದ್ದಾರೆ, ಕೈಗಾರಿಕೆಗಳಲ್ಲಿ ಆಸಕ್ತಿ ಇರುವವರು ಹಾಗೂ ಟ್ರೇಡ್ ಯೂನಿಯನ್ ಮುಖಂಡರುಗಳನ್ನು ಸೇರಿಸಿ ಒಂದು ಸಮಿತಿ ಮಾಡಿದರೆ ತನುಕೂಲವಾಗುತ್ತದೆ, ಇದರ ಬಗ್ಗೆ ಯೋಚನೆ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್ —ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಒಂದು ಕನ್‌ಸಲ್ಟೇಟೀವ್ ಕಮಿಟಿ ಇದೆ. ಆ ಸಮಿತಿಯಲ್ಲಿ ಎರಡು ಜನ ಈ ಮನೆಯ ಸದಸ್ಯರು, ಉದ್ಯಮಕ್ಕೆ ಸಂಬಂಧಪಟ್ಟ ತಜ್ಞರು, ಕಾರ್ಮಿಕ ಪ್ರತಿನಿಧಿಗಳು ಇದ್ದಾರೆ. ಇದು ಕೇವಲ ರೋಗಗ್ರಸ್ಥ ಉದ್ದಿಮೆಗಳ ಬಗ್ಗೆ ವಿಚಾರ ಮಾಡುವಂಥ ಸಮಿತಿ.

ಶ್ರೀ ಎಂ. ಎಸ್. ಕೃಷ್ಣನ್.— ಕನ್‌ಸಲ್ಟೆಟೀವ್ ಕಮಿಟಿ ಇದೆ. ಆದರಲ್ಲಿ ಈ ಮನೆಯ ಸದಸ್ಯರುಗಳು ಇದ್ದಾರೆ. ಸರ್ಕಾರಿ ಅಧಿಕಾರಿಗಳು ಇದ್ದಾರೆ. ಇದು ಶಾಸನ ಸಭೆ ಸೇರುವಾಗ ಸೇರುತ್ತೆ, ಇನ್ನು ಒಂದು ಸಾರಿ ಕೂಡ ಸೇರಿಲ್ಲ.

ಶ್ರೀ ಜೆ. ಹೆಚ್. ಪಟೇಲ್. — ಎರಡು ಸಾರಿ ಸೇರಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಕಾರ್ಮಿಕರ ಮುಖಂಡರುಗಳು, ಈ ಮನೆಯ ಸದಸ್ಯರುಗಳು ಹಾಗೂ ಕೈಗಾರಿಕೋದ್ಯಮಿಗಳು ಸೇರಿ ಕೈಗಾರಿಕೆಗಳ ಬಗ್ಗೆ ಚರ್ಚೆ ಮಾಡಿ ಇರತಕ್ಕ ಸಮಸ್ಯೆಗಳನ್ನು ಬಗಹರಿಸುವುದಕ್ಕೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.— ನಾನು ಆಗಲೇ ಹೇಳಿದ ಹಾಗೆ ಈ ಒಂದು ಸಮಿತಿ ರೋಗಗ್ರಸ್ಥ ಕಾರ್ಖಾನೆಗಳ ಬಗ್ಗೆ ಮಾತ್ರ ಇದೆ. ಇದರಲ್ಲಿ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾದ ಹಾಗೂ ಹಣಕಾಸು ಸಂಸ್ಥೆಯ ರೆಪ್ರಸೆಂಟೇಟೀವ್ಸ್ ಇದ್ದಾರೆ. ಇದು ಕೇವಲ ನಿಶ್ಚಿತವಾದ ಕೆಲಸವಾಗಿದೆ. ಕಾರ್ಮಿಕ ಮುಖಂಡರ ಸಲಹೆ ಪಡೆಯಬೇಕು ಎಂಬುದರ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಇದು ಆಕ್ಟೋಬರ್ ತಿಂಗಳಿನಲ್ಲಿ ರಚನೆ ಆಯಿತು. ಜನವರಿಯಲ್ಲಿ ಮೊದಲನೆಯ ಸಾರಿ ಸಭೆ ಸೇರಿದೆ. ತಮಗೆ ಗೊತ್ತಿದ್ದ ಹಾಗೆ ಪರಿಸ್ಥಿತಿ ಗಂಭೀರವಾಗುತ್ತಿದೆ. ಇವೊತ್ತು ಎಲ್ಲಾ ಕೈಗಾರಿಕೆಗಳ ಆಡಳಿತವನ್ನು ಚಿಂರುಂಡುಗೊಳಿಸಿ ಅನೇಕ ಕೈಗಾರಿಕೆಗಳ ಬಗ್ಗೆ ಏನು ಹೇಳಿದ್ದಾರೆ, ಅದರ ಬಗ್ಗೆ ಚರ್ಚೆ ಮಾಡಿ ಈ ಮನೆಯ ಮುಂದೆ ಶಿಫಾರಸ್ಸು ಇಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.— ಅದೇ ಕೆಲಸ ನಾನು ಮಾಡುತ್ತಿರುವುದು.

ಚಂದ್ರಾ ಬಡಾವಣೆಗೆ ೯೨ ದಾರಿ ದೀಪಗಳನ್ನು ಒದಗಿಸಲು ಕೆಲಸ ಕಾರ್ಯವು ತಡವಾಗಿರುವ ಬಗ್ಗೆ

೬೩೦. (ಡಿ) ಶ್ರೀ ಬಿ. ಧರ್ಮಪ್ಪ(ಸಾಗರ).— ಮಾನ್ಯ ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೇ ?

ಅ) ಚಂದ್ರ ಬಡಾವಣೆಯ ನಿವಾಸಿಗಳು ದಾರಿ ದೀಪಗಳನ್ನು ಒದಗಿಸಿಕೊಡುವಂತೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ೨—೩ ವರ್ಷಗಳಿಂದ ಕೋರಿಕೆ ಸಲ್ಲಿಸುತ್ತಾ ಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸದರಿ ಬಡಾವಣೆಗೆ ಬೀದಿ ದೀಪಗಳನ್ನು ಹಾಕುವಂತೆ ವಿದ್ಯುತ್ ಮಂಡಳಿಗೆ ಕೋರಿಕೆ ಸಲ್ಲಿಸಿ ೯೨ ಬೀದಿ ದೀಪಗಳ ಸಲಕರಣೆಗಳನ್ನು ಕೊಟ್ಟು ತುಂಬಾ ದಿನಗಳಾದರೂ ಇಲ್ಲಿಯವರೆಗೆ ಅದನ್ನು ಕಾರ್ಯಗತ ಮಾಡದಿರಲು ಕಾರಣಗಳೇನು ?

ಇ) ಇಂತಹ ನಗರದ ಹೊರವಲಯದ ಬಡಾವಣೆಗಳಲ್ಲಿ ಬೀದಿ ದೀಪಗಳಿಲ್ಲದೆ ಡಕಾಯಿತಿ, ಕೊಲೆ, ಕಳ್ಳತನಕ್ಕೆ ಅವಕಾಶವಾಗುತ್ತಿರುವುದು ನಿಜವಲ್ಲವೆ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಬಂದಿದೆ.

ಆ) ಮತ್ತು ಇ) ದಿನಾಂಕ ೬.೧೨.೧೯೮೬ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಫಿಟ್ಟಿಂಗಗಳನ್ನು ಕೊಟ್ಟಿದೆ. ಕೆಲಸ ನಡೆಯುತ್ತಿದೆ.

ಶ್ರೀ ಜೆ. ಹೆಚ್. ಪಟೇಲ್.— ನಮ್ಮ ಪ್ರಶ್ನೋತ್ತರದಲ್ಲಿ ಮೂರನೆಯ ಪ್ರಶ್ನೆಗೆ ಉತ್ತರ ಇಲ್ಲದೇ ಇರುವುದರಿಂದ ನಾನು ಇದನ್ನು ಹೇಳುತ್ತೇನೆ. ಮೂರನೆಯ ಪ್ರಶ್ನೆಗೆ ಉತ್ತರ "ನಿಜವಲ್ಲ"

ಶ್ರೀ ಬಿ. ಧರ್ಮಪ್ಪ.— ಚಂದ್ರಾಬಡಾವಣೆಗೆ ದಾರಿ ದೀಪಗಳನ್ನು ಒದಗಿಸಿಕೊಡುವ ಬಗ್ಗೆ ಸುಮಾರು ವರ್ಷಗಳಿಂದಲೂ ಕೇಳಿದರೂ ಇದುವರೆಗೂ ಆಗಿಲ್ಲ. ಇದರ ಬಗ್ಗೆ ಸರಿಯಾಗಿ ಮಂನಸ್ಸು ಮಾಡಿದರೆ ಮೂರುವಾರದಲ್ಲಿ ಮುಗಿಸಬಹುದು. ಇದನ್ನು ಏತಕ್ಕೆ ಮಾಡಲಿಲ್ಲ ? ಅಲ್ಲಿಯ ಜನರಿಗೆ ಬಹಳ ಕಷ್ಟವಾಗಿದೆ.

ಶ್ರೀ ಜೆ. ಹೆಚ್. ಪಟೇಲ್.— ಚಂದ್ರಾ ಬಡಾವಣೆ ಎಲ್ಲಿದೆ ಎಂದು ಮಾನ್ಯ ಸದಸ್ಯರು ತಿಳಿಸುತ್ತೀರಾ ? ಮಾನ್ಯ ಸದಸ್ಯರಿಗೆ ಚಂದ್ರಾ ಬಡಾವಣೆ ಎಲ್ಲಿದೆ ಎಂದು ಗೊತ್ತಿದ್ದರೆ ಉತ್ತರ ಹೇಳಬಹುದು. ಆ ಬಡಾವಣೆಯಲ್ಲಿ ಮನೆಗಳು ಇಲ್ಲ, ಅಲ್ಲಿ ಅನ್‌ಅಥರೈಸ್ಡ್ ಆಗಿ ಕಟ್ಟಿರತಕ್ಕ ಗುಡಿಸಲುಗಳು ಮಾತ್ರ ಇವೆ. ಈ ಕೆಲಸ ಏತಕ್ಕೆ ಆಗಿಲ್ಲ ಎನ್ನುವುದನ್ನು ಕೇಳುವುದಕ್ಕೆ ಮೊದಲು ಚಂದ್ರಾ ಬಡಾವಣೆಗೆ ಹೋಗಿ ನೋಡಿಕೊಂಡು ಬರಬೇಕು.

ಶ್ರೀ ಬಿ. ಧರ್ಮಪ್ಪ.— ದಿನಾಂಕ ೫-೧೨-೧೯೮೬ರಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲಿ ಎಲ್ಲೆಲ್ಲಿ ದೀಪ ಇಲ್ಲ, ಅಲ್ಲಿ ದರೋಡೆಗಳು ಜಾಸ್ತಿಯಾಗಿ ನಡೆಯುತ್ತವೆ ಎಂದು ಬಂದಿದೆ. ಇದು ದರೋಡೆಕಾರರ ಗಮನಕ್ಕೂ ಬಂದಿದೆ. ಆದ್ದರಿಂದ ಮಾನ್ಯ ಸಚಿವರು ಗೃಹಸಚಿವರಿಗೆ ತಿಳಿಸುವುದರ ಜೊತೆಗೆ ಆದಷ್ಟು ಜಾಗ್ರತೆ ದಾರಿ ದೀಪಗಳನ್ನು ಒದಗಿಸಿ ಕೊಡುವ ವ್ಯವಸ್ಥೆಯನ್ನು ಮಾಡಿಕೊಡಬೇಕು.

ಶ್ರೀ ಜೆ. ಹೆಚ್. ಪಟೇಲ್.— ಆಯಿತು, ದರೋಡೆ ಆಗದಂತೆ ನೋಡಿಕೊಳ್ಳೋಣ.

ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಬಗೆಗೆ

೫೯೯. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ವಾಣಿಜ್ಯ, ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದವರು ಭದ್ರಾವತಿ ವಿಶ್ವೇಶ್ವರಯ್ಯ ಉಕ್ಕಿನ ಕಾರ್ಖಾನೆಗೆ ಒದಗಿಸಿರುವ ಬಂಡವಾಳ ವೆಷ್ಟು ?

ಆ) ೧೯೮೫-೮೬, ೮೬-೮೭ನೇ ಸಾಲಿನಲ್ಲಿ ಕಾರ್ಖಾನೆ ಗಳಿಸಿರುವ ಲಾಭವೆಷ್ಟು ? ನಷ್ಟವೆಷ್ಟು ?

ಇ) ಭದ್ರಾವತಿ ಕಾರ್ಖಾನೆಯಲ್ಲಿ ಆಡಳಿತವರ್ಗದಿಂದ ಭ್ರಷ್ಟಾಚಾರ ನಡೆಯುತ್ತಿದ್ದು ಅದರಿಂದ ನಷ್ಟವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಅದರ ಆಡಳಿತವನ್ನು ಉತ್ತಮಗೊಳಿಸಲು ಹಾಗೂ ಲಾಭಬರುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮಂತ್ರಿ ವಿದ್ಯುಚ್ಛಕ್ತಿ ಸಚಿವರು).—

ಅ) ೨೭೮೪ ಲಕ್ಷ ರೂ.ಗಳು.

ಆ) ೧೯೮೫-೮೬ ರಲ್ಲಿ ೩೨೪೦.೭೯ ಲಕ್ಷ ರೂ.ಗಳು ನಷ್ಟ. ೧೯೮೬-೮೭ನೇ ವರ್ಷವು ೩೧-೩-೮೭ ರಂದು ಕೊನೆಗೊಳ್ಳಲಿರುವುದರಿಂದ ಈ ಸಾಲಿನ ಲಾಭ ನಷ್ಟವು ಇನ್ನು ತಿಳಿದುಬಂದಿಲ್ಲ.

ಕಂಪೆನಿಯು ಅನುಭವಿಸುತ್ತಿರುವ ನಷ್ಟಕ್ಕೆ ಭಾರಿ ವೊತ್ತದ ಹಣದ ದುರುಪಯೋಗವು ಕಾರಣವಾಗಿದೆಯೆಂನ್ನುವುದಕ್ಕೆ ಸಂಬಂಧಿಸಿದಂತೆ ಯಾವುದೇ ಕೇಸುಗಳು ಸರ್ಕಾರಕ್ಕೆ ವರದಿಯಾಗಿಲ್ಲ.

ಪ್ರಶ್ನೆ (ಇ) ಗೆ ನೀಡಿರುವ ಉತ್ತರದಿಂದ ಆಡಳಿತವನ್ನು ಉತ್ತಮಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.